**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಎಡಿಎಂ2/ವನಮಹೋತ್ಸವ 01/2009-10 ದಿನಾಂಕ: 01-07-2009

# ಸುತ್ತೋಲೆ

ವಿಷಯ: ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ
ವನಮಹೋತ್ಸವ ಆಚರಿಸುವ ಬಗ್ಗೆ.

&&&

ಜೈವಿಕ ಇಂಧನಗಳ ದುರ್ಬಳಕೆ ಹಾಗೂ ಮಾನವನ ಅತಿಯಾಸೆಯಿಂದ ಇಂದು ಜಾಗತಿಕ ತಾಪಮಾನ ಹೆಚ್ಚಾಗಿ ಅದರಿಂದ ಅನೇಕ ದುಷ್ಪರಿಣಾಮಗಳಾಗುತ್ತಿವೆ. ಕೆಲವು ಜೀವಸಂಕುಲಗಳು ನಾಶವಾಗಿದ್ದರೆ ಮತ್ತೆ ಕೆಲವು ವಿನಾಶದ ಅಂಚಿನಲ್ಲಿವೆ. ಜೀವಸಂಕುಲಗಳನ್ನು ರಕ್ಷಿಸುವುದಲ್ಲದೆ ಭೂಗ್ರಹವನ್ನು ಮುಂದಿನ ಪೀಳಿಗೆಗೆ ಸುಸ್ಥಿತಿಯಲ್ಲಿಡುವ ಅವಶ್ಯಕತೆಯಿದೆ. ಈ ಉದ್ದೇಶದಿಂದ ನಮ್ಮ ಪರಿಸರದಲ್ಲಿ ಹೆಚ್ಚು ಹೆಚ್ಚು ಗಿಡ ಮರಗಳನ್ನು ಬೆಳಸುವ ಅವಶ್ಯಕತೆ ಇದೆ. ಸಾರ್ವಜನಿಕ ಶಿಕ್ಷಣ ಇಲಾಖೆಯು ಜುಲೈ 21 ರಿಂದ 27 ರವರೆಗಿನ ಒಂದು ವಾರವನ್ನು ವನಮಹೋತ್ಸವ ಸಪ್ತಾಹವನ್ನಾಗಿ ಆಚರಿಸಲು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಜುಲೈ 21 ರಿಂದ 27 ರವರೆಗೆ ಒಂದು ದಿವಸ ಸಾಧ್ಯವಿರುವ ಕಡೆಗಳಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು. ಸಸಿಗಳನ್ನು ಪಡೆಯಲು ಮತ್ತು ಅವುಗಳನ್ನು ರಕ್ಷಿಸಲು ಅರಣ್ಯ ಇಲಾಖೆಯ ಸಹಕಾರವನ್ನು ಪಡೆದುಕೊಳ್ಳುವುದು. ನೆಟ್ಟ ನಂತರ ಅದರ ಪೋಷಣೆಯ ಜವಾಬ್ದಾರಿಯನ್ನು ಶಾಲಾ ಮಕ್ಕಳಿಗೆ ವಹಿಸುವುದು. ವನಮಹೋತ್ಸವವನ್ನು ಎಸ್.ಡಿ.ಎಂ.ಸಿ ಸದಸ್ಯರು, ಸಮುದಾಯ, ಶಿಕ್ಷಣಾಸಕ್ತರು, ಶಿಕ್ಷಕರು ಮಕ್ಕಳು, ಸಿ.ಆರ್.ಪಿಗಳು ಎಲ್ಲರೂ ಸೇರಿ ಒಂದು ಪರಿಸರ ಜಾಗೃತಿ ಕಾರ್ಯಕ್ರಮವಾಗಿ ಆಚರಿಸುವುದು. ಅಂದು ಪರಿಸರ ಕಾಳಜಿ, ಜಾಗತಿಕ ತಾಪಮಾನದ ಹೆಚ್ಚಳ ಅದರಿಂದಾಗುವ ಅನಾಹುತಗಳ ಬಗ್ಗೆ ಮಕ್ಕಳಿಗೆ ತಿಳಿಸುವುದು ಎಂದು ಈ ಮೂಲಕ ತಮಗೆ ಸೂಚಿಸಿದೆ.

(ಜಿ. ಕುಮಾರ ನಾಯಕ),
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1) ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಅಭಿವೃದ್ಧಿ, ರವರು ಜರೂರು ಕ್ರಮವಹಿಸಲು ತಿಳಿಸಿದೆ.
2) ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಜರೂರು ಕ್ರಮವಹಿಸಲು ತಿಳಿಸಿದೆ.
3) ಕಚೇರಿ ಪ್ರತಿ.